# ಮುಹೂರ್ತಂ ಜ್ವಲಿತಂ ಶ್ರೇಯಃ

**ಗುಜರಾತ್** ರಾಜ್ಯದ ಬುಲ್ಸರ್‌ನಲ್ಲಿರುವ ಲೆಡರ್ಲಿ ಲ್ಯಾಬೋರೇಟರೀಸ್‌ನ ಕಾರ್ಯಾಗಾರದಲ್ಲಿ ಒಂದು ಪ್ರತಿಮೆ ಇದೆ. ಆ ಪ್ರತಿಮೆಯ ವ್ಯಕ್ತಿಯನ್ನು 'ವಿಜ್ಞಾನಿ, ಶಿಕ್ಷಕ ಮತ್ತು ಮಾನವತಾವಾದಿ' ಎಂದು ವರ್ಣಿಸುತ್ತಾ 'ವಿಜ್ಞಾನವು ಜೀವನವನ್ನು ಕೇವಲ ದೀರ್ಘಗೊಳಿಸುತ್ತದೆ, ಧರ್ಮವು ಅದನ್ನು ಆಳವಾಗಿಸುತ್ತದೆ' ಎಂಬ ಬರಹವೊಂದು ಆ ಪ್ರತಿಮೆಯಡಿ ನಮೂದಿತವಾಗಿದೆ. ಈ ಬರಹದ ಜೀವಂತ ನಿದರ್ಶನವೇ ಆ ಪ್ರತಿಮೆಯ ವ್ಯಕ್ತಿ—ಎಲ್ಲಪ್ರಗಡ ಸುಬ್ಬರಾವ್.

ಕೇವಲ ೫೩ ವರ್ಷಗಳಷ್ಟೇ ಬದುಕಿದ್ದ ಸುಬ್ಬರಾವ್‌ರವರ ಬಾಳಿನಲ್ಲಿ ನಮ್ಮ ಯುವಜನರು ಅನುಸರಿಸಬಹುದಾದ, ಅದ್ಭುತವಾದ ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ದಾಹವನ್ನು ಕಾಣುತ್ತೇವೆ. ಆಂಧ್ರಪ್ರದೇಶದ ಕಡುಬಡತನದ ಕುಟುಂಬವೊಂದರಲ್ಲಿ ಜನಿಸಿದ್ದರೂ ವಿದ್ಯಾರ್ಥಿದೆಸೆಯಲ್ಲಿ ಈತನಲ್ಲಿ ಪರಿಶ್ರಮ ಪ್ರತಿಭೆಗಳಿಗೇನೂ ಕೊರತೆ ಇರಲಿಲ್ಲ. ಈತನ ಸಹೋದರ ತನ್ನ ಚಿಕ್ಕ ವಯಸ್ಸಿನಲ್ಲಿಯೇ ಆಗಿನ ಕಾಲದಲ್ಲಿ ಗುಣಪಡಿಸಲಾಗದ ರೋಗವೆನಿಸಿಕೊಂಡಿದ್ದ ಅತಿಸಾರ ರೋಗದಿಂದ ಪೀಡಿತನಾಗಿದ್ದ. ದಿನದಿನಕ್ಕೂ ತನ್ನ ಸಹೋದರನು ಕ್ಷೀಣಿಸುತ್ತಿದ್ದುದನ್ನು ಬಹಳ ನೋವಿನಿಂದ ಗಮನಿಸುತ್ತಿದ್ದ ಈ ಬಾಲಕ ಕೊನೆಗೊಂದು ದಿನ ಸಾವು ಅವನನ್ನು ಬಲಿತೆಗೆದುಕೊಳ್ಳುವುದನ್ನು ಅಸಹಾಯಕತೆಯಿಂದ ನೋಡುವಂತಾಯಿತು. ಆಗ ಆ ಚಿಕ್ಕ ಹುಡುಗನ ಭಾವನೆಗಳಲ್ಲಿ ಒಂದು ದೊಡ್ಡ ಪರಿವರ್ತನೆಯೇ ಆಯಿತು. ಇಂತಹ ಮಾರಕ ರೋಗಕ್ಕೆ ಪರಿಹಾರವಿಲ್ಲವೇ ಎಂಬ ಚಿಂತೆ ಆ ಬಾಲಕನನ್ನು ತೀವ್ರವಾಗಿ ದಹಿಸತೊಡಗಿತು. ಅವನು ಅಂದೇ ಅಲ್ಲಿಯೇ ಅದಕ್ಕೆ ಪರಿಹಾರವನ್ನು ಕಂಡುಹಿಡಿಯಲು ತನ್ನ ಜೀವನವನ್ನೇ ಸಂಪೂರ್ಣವಾಗಿ ಸಮರ್ಪಿಸುವೆನೆಂದು ತನ್ನೊಳಗೇ ಪ್ರತಿಜ್ಞೆ ಮಾಡಿದ. ಈ ಮಧ್ಯೆ ಬಾಲ್ಯದಿಂದಲೂ ಅಧ್ಯಾತ್ಮ ಜೀವನದಲ್ಲಿ ತೀವ್ರವಾದ ಒಲವನ್ನು ಬೆಳೆಸಿಕೊಂಡಿದ್ದ ಅವನು ಅಧ್ಯಾತ್ಮಸಾಧನೆಯನ್ನೂ ಅಧ್ಯಯನದ ಜೊತೆ ಹೊಂದಿಸಿಕೊಂಡಿದ್ದನು.

ಪ್ರೌಢಶಿಕ್ಷಣ ಮುಗಿದ ನಂತರ ಕಿರಿಯನಾದ ಸುಬ್ಬರಾವ್‌ಗೆ ವೈದ್ಯಶಾಸ್ತ್ರವನ್ನು ಅಧ್ಯಯನ ಮಾಡಲು ಆತನ ಗೆಳೆಯರು ಸಹಾಯ ಮಾಡಿದರು. ಆತನು ಕ್ರಮವಾಗಿ ಎಂ.ಬಿ.ಬಿ.ಎಸ್ ಮತ್ತು ಎಂ.ಎಸ್ ವ್ಯಾಸಂಗವನ್ನು ಮುಗಿಸಿದನು. ಆದರೆ ಆಗೆಲ್ಲಾ ಆ ಮಾರಕ ರೋಗಕ್ಕೆ ಪರಿಹಾರ ಕಂಡುಹಿಡಿಯುವುದು ಹೇಗೆ ಎಂಬ ಒಂದೇ ಒಂದು ಭಾವನೆಯು ಆತನ ಮನಸ್ಸನ್ನಾಕ್ರಮಿಸಿತ್ತು. ಮದ್ರಾಸಿನಲ್ಲಿ ವೈದ್ಯಕೀಯ ವ್ಯಾಸಂಗವನ್ನು ಮುಗಿಸಿದ ತರುವಾಯ ಆತನು ವಿಶೇಷ ಸಂಶೋಧನೆಗಾಗಿ ೧೯೨೩ರಲ್ಲಿ ಮೊದಲು ಇಂಗ್ಲೆಂಡ್‌ಗೆ, ತೆರಳಿ ನಂತರ ಅಮೆರಿಕದ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿನ ಸಂಶೋಧನಾ ತಂಡವೊಂದನ್ನು ಸೇರಿದ. ಮೊದಲು ತುಂಬ ಕಷ್ಟ ಅನುಭವಿಸಬೇಕಾಯಿತು. ಜೀವನೋಪಾಯಕ್ಕಾಗಿ ಮನೆಗೆಲಸಗಳನ್ನೂ ಮಾಡಬೇಕಾಯಿತು. ಕೊನೆಗೆ ೧೯೪೦ರಲ್ಲಿ ನ್ಯೂಯಾರ್ಕಿನ ಅಮೆರಿಕನ್ಸ್ ಸೈನಮೆಡ್ ಕಂಪೆನಿಯ ಲೆಡರ್ಲಿ ಪ್ರಯೋಗಾಲಯದಲ್ಲಿ ಕೆಲಸ ಮಾಡಲು ಆತನಿಗೆ ಆಹ್ವಾನ ಬಂದಿತು. ಆತನ ಆಸಕ್ತಿ ಮತ್ತು ಪ್ರತಿಭೆಯಿಂದ ಪ್ರಭಾವಿತಗೊಂಡ ಆ ಔಷಧ ಸಂಶೋಧನಾ ಕಾರ್ಯಾಗಾರದ ಆಡಳಿತ ಮಂಡಳಿಯು ಆತನು ಸಂಶೋಧನೆಯಲ್ಲಿ ಮುಂದುವರೆಯುವಂತೆ ಆತನಿಗೆ ಪ್ರೋತ್ಸಾಹವನ್ನು ನೀಡಿತು ಮತ್ತು ೧೯೪೨ರಿಂದ ಅದರ ವಿಜ್ಞಾನಿಗಳ ತಂಡದ ಸಂಶೋಧನಾ ಕಾರ್ಯವನ್ನು ನಿರ್ದೇಶಿಸುವ ಕಾರ್ಯವನ್ನು ಅವನಿಗೆ ಒಪ್ಪಿಸಿತು.

ಅನೇಕ ವರ್ಷಗಳ ನಿರಾಸೆ ಖಿನ್ನತೆಗಳ ಮೂಲಕ ಸಂಶೋಧನೆಯು ಮುಂದುವರಿಯಿತು. ಅಂತಿಮವಾಗಿ ಸುಬ್ಬರಾವ್ ಫೋಲಿಕ್ ಆ್ಯಸಿಡ್‌ನ ಒಂದು ಸಣ್ಣ ಕಣವನ್ನು ಪ್ರತ್ಯೇಕಗೊಳಿಸುವಲ್ಲಿ ಯಶಸ್ವಿಯಾದರು. ಕೊನೆಗೆ ಅವರ ತಂಡವು ೧೯೪೫ನೇ ಇಸವಿಯಲ್ಲಿ ಹಳದಿಯ ಪುಡಿಯ ರೂಪದಲ್ಲಿ ಕೃತಕ ಫೋಲಿಕ್ ಆ್ಯಸಿಡ್‌ನ್ನು ಉತ್ಪಾದಿಸುವಲ್ಲಿ ಯಶಸ್ವಿಯಾಯಿತು. ಅದೊಂದು ಶ್ರೇಷ್ಠ ಆವಿಷ್ಕಾರವಾಯಿತು. ಅನಂತರ ಆಸ್ಪತ್ರೆಯಲ್ಲಿನ ರೋಗಿಗಳ ಮೇಲೆ ಅದನ್ನು ಪ್ರಯೋಗಿಸಿದಾಗ ಪರೀಕ್ಷೆಯ ಫಲಿತಾಂಶ ಅದ್ಭುತವಾಗಿತ್ತು. ಅದು ಅಪಸ್ಮಾರ ಮಾರಕರೋಗಕ್ಕೆ ಅತ್ಯಾಶ್ಚರ್ಯಕರವಾದ ಪರಿಹಾರವಾಗಿ ಕೂಡಲೇ ಮಾರುಕಟ್ಟೆಯನ್ನು ಪ್ರವೇಶಿಸಿತು.

ಅವರು ಈ ಸಂಶೋಧನೆಯ ಯಶಸ್ಸನ್ನು ವೈಯಕ್ತಿಕ ಸಿದ್ಧಿಯಾಗಿ ಸ್ವೀಕರಿಸಲಿಲ್ಲ. ಬದಲಾಗಿ ಆ ಯಶಸ್ಸಿನ ಕೀರ್ತಿಯನ್ನು ತಮ್ಮ ತಂಡದ ಸದಸ್ಯರಿಗೆ ಕೊಟ್ಟರು. ಇದಾದ ಕೂಡಲೇ ಅವರ ನಿರ್ದೇಶನದಲ್ಲಿ ಅವರ ತಂಡ ಆ್ಯರೋಮಿಸಿನ್ ಎಂಬ ಮತ್ತೊಂದು ಅದ್ಭುತ ಔಷಧಿಯನ್ನು ಕಂಡುಹಿಡಿಯಿತು. ಆ ಎಲ್ಲಾ ದಿವಸಗಳಲ್ಲಿ ತಮ್ಮ ಸುತ್ತ ಮುತ್ತಲಿನ ಇತರ ಜನರ ನೋವುಗಳನ್ನು ನಿವಾರಿಸುವ ಸಲುವಾಗಿ ತಮ್ಮ ಸ್ವಂತ ಆದಾಯವನ್ನು ಉಚಿತವಾಗಿ ಕೊಟ್ಟರು. ಡಾ. ಎಲ್ಲಪ್ರಗಡ ಸುಬ್ಬರಾವ್‌ರವರು ಅಮೆರಿಕಾದಲ್ಲಿ ತಮ್ಮ ೫೩ನೇ ವಯಸ್ಸಿನಲ್ಲಿ ತೀರಿಕೊಂಡರು (೧೯೪೮)

ಅವರ ಬಾಳಿನಲ್ಲಿ ಸತ್ಯಪ್ರೇಮ, ಮಾನವಪ್ರೇಮ ಮತ್ತು ಧೈರ್ಯ ಜ್ಯೋತಿಯಂತೆ ಬೆಳಗುತ್ತಿದ್ದುವು. ನಮ್ಮ ದೇಶ ವೈಜ್ಞಾನಿಕ ರಾಷ್ಟ್ರವಾಗುವುದಕ್ಕೆ ಮುನ್ನ ಡಾ.ಸುಬ್ಬರಾಯರ ಜೀವನದಲ್ಲಿ ಕಂಡು ಬರುವ ಮಾನವಪ್ರೇಮ, ಜಿಜ್ಞಾಸಾ ಪ್ರವೃತ್ತಿ ಮತ್ತು ಸತ್ಯನಿಷ್ಠೆ—ಈ ಆದರ್ಶಗಳನ್ನು ನಮ್ಮ ಯುವಜನತೆ ಮೈಗೂಡಿಸಿಕೊಳ್ಳುವುದು ಅಗತ್ಯ. *(ಸಂಗ್ರಹ: ವಿಜಯಕುಮಾರ)*